### ವಿದ್ಯಾರ್ಥಿಗಳಿಗೆ ಪ್ರೇರಣಾ ಶಿಬಿರದಲ್ಲಿ ಎನ್ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಸಲಹೆ

# ಉದ್ಯೋಗ ಕ್ಷೇತ್ರದ ಅವಕಾಶ ಸದ್ಬಳಕೆ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಉದ್ಯೋಗ ಕ್ಷೇತ್ರದಲ್ಲಿ ಬದಲಾಗುತ್ತಿರುವ ಸನ್ನಿವೇಶವನ್ನು ಯುವ ಮನಸ್ಸುಗಳು ಅವಕಾಶಗಳನ್ನು ಸೃಷ್ಟಿಸಲು ಬಳಸಿಕೊಳ್ಳಬೇಕು. ಬೂಟ್ ಕ್ಯಾಂಪ್‌ಗಳ ಮೂಲಕ ವಿದ್ಯಾರ್ಥಿಗಳು ಹೊಸ ಕೌಶಲಗಳನ್ನು ಕಲಿಯಲು ಪ್ರೋತ್ಸಾಹಿಸಲಾಗುತ್ತದೆ ಎಂದು ಸುರತ್ಕಲ್ ಎನ್ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಹೇಳಿದರು.

ಶಿಕ್ಷಣ ಸಚಿವಾಲಯ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ(ಎಐಸಿಟಿಇ) ಮತ್ತು ಶಿಕ್ಷಣ ಸಚಿವಾಲಯದ ಇನ್ನೋವೇಶನ್ ಸೆಲ್ (ಎಂಐಸಿ) ವತಿಯಿಂದ ಸುರತ್ಕಲ್ ಎನ್ಐಟಿಕೆಯಲ್ಲಿ ಆಯೋಜಿಸಲಾದ ಐದು ದಿನಗಳ 'ನಾವೀನ್ಯತೆ, ವಿನ್ಯಾಸ ಮತ್ತು ಉದ್ಯಮಶೀಲತೆ(ಐಡಿಇ)' ಬೂಟ್ ಕ್ಯಾಂಪ್‌ನ ಎರಡನೇ ಆವೃತ್ತಿಯ ಮೊದಲ ಹಂತದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಸೋಮವಾರ ಮಾತನಾಡಿದರು.

ಸಿಲಿಕಾನ್ ವ್ಯಾಲಿಯಲ್ಲಿ ಲಾಭದಾಯಕ ಉದ್ಯಮ ಸ್ಥಾಪನೆ ಕುರಿತು ಮಾತನಾಡಿದ ಡ್ರೈವ್ ಸಹ ಸಂಸ್ಥಾಪಕ, ಸಿಇಒ ಮತ್ತು ಕಾರ್ಯನಿರ್ವಾಹಕ ಅಧ್ಯಕ್ಷ ರಾಮಪ್ರಸಾದ್ ಶಾಸ್ತ್ರಿ, ತಂತ್ರಜ್ಞಾನದ ವಿದ್ಯಾರ್ಥಿಗಳು ಸ್ಟಾರ್ಟಪ್‌ಗಳ ಬಗ್ಗೆ ಎಲ್ಲವನ್ನೂ ತಿಳಿದುಕೊಳ್ಳುವುದು ಅಗತ್ಯ ಎಂದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ(ಎಐಸಿಟಿಇ) ಇನ್ನೋವೇಶನ್ ಅಧಿಕಾರಿ ಮತ್ತು ನೋಡಲ್ ಕೇಂದ್ರದ ಮುಖ್ಯಸ್ಥ ಅಭಿಷೇಕ್ ರಂಜನ್ ಕುಮಾರ್ ಮಾತನಾಡಿ, ಬೂಟ್ ಕ್ಯಾಂಪ್‌ನಲ್ಲಿ ಭಾಗವಹಿಸುವವರನ್ನು ಅವರ ಪ್ರಾಜೆಕ್ಟ್ ಐಡಿಯಾಗಳ ಆಧಾರದ ಮೇಲೆ ವಿವಿಧ ಕಾಲೇಜುಗಳಿಂದ ಆಯ್ಕೆ ಮಾಡಲಾಗುತ್ತದೆ. ಅವರನ್ನು ರೂಪಿಸಲು ತಜ್ಞರೊಂದಿಗೆ ಸೆಷನ್‌ಗಳು ಮತ್ತು ಪ್ಯಾನಲ್ ಚರ್ಚೆಗಳನ್ನು ನಡೆಸಲಾಗುತ್ತದೆ. ಬೂಟ್ ಕ್ಯಾಂಪ್‌ಗಳನ್ನು ದೇಶದ 10 ವಿವಿಧ ಸ್ಥಳಗಳಲ್ಲಿ ನಡೆಸಲಾಗುತ್ತದೆ ಎಂದರು. ಎಐಸಿಟಿಇ ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್ ಮಾತನಾಡಿದರು.

**ಪ್ರಾಜೆಕ್ಟ್ ಪ್ರದರ್ಶನ:** ಎಐಸಿಟಿಇ ಇನ್ನೋವೇಶನ್ ಮ್ಯಾನೇಜರ್ ಎಸ್.ಸ್ಯಾಮ್ ಜೈಕುಮಾರ್ ಮಾತನಾಡಿ, ಎಐಸಿಟಿಇ 100 ಪ್ಲಸ್ ಹೂಡಿಕೆದಾರರೊಂದಿಗೆ ಹೂಡಿಕೆದಾರರ ಜಾಲವನ್ನು ಅಭಿವೃದ್ಧಿಪಡಿಸಿದ್ದು, ಕೈಗಾರಿಕಾ ಅಗತ್ಯಗಳಿಗಾಗಿ ಯೋಜನೆಗಳಿಗೆ ಧನಸಹಾಯ ನೀಡಿದೆ. ಐಪಿ(ಬೌದ್ಧಿಕ ಆಸ್ತಿ) ಸಾಕ್ಷರತೆ ಮತ್ತು ಜಾಗೃತಿಗಾಗಿ ಕಪಿಲಾ- ಕಲಾಂ ಕಾರ್ಯಕ್ರಮದಡಿ ಹಣವನ್ನು ಸಹ ಒದಗಿಸಲಾಗಿದೆ ಎಂದರು.

ವಿದ್ಯಾರ್ಥಿಗಳಿಂದ ಪ್ರಾಜೆಕ್ಟ್‌ಗಳ ಪ್ರದರ್ಶನ ನಡೆಯಿತು. ಎನ್ಐಟಿಕೆ ನೋಡಲ್ ಸೆಂಟರ್ ಎಸ್ಒಸಿ ಶಿಕ್ಷಕಿ ಡಾ.ಸುಪ್ರಭಾ ಕೆ.ಆರ್. ಮತ್ತು ಐಡಿಇ ಬೂಟ್ ಕ್ಯಾಂಪ್ ಶಿಕ್ಷಕ ಪ್ರೊ.ಸುಬ್ರಾಯ ಹೆಗ್ಡೆ ಉಪಸ್ಥಿತರಿದ್ದರು.



ಸುರತ್ಕಲ್ ಎನ್ಐಟಿಕೆಯಲ್ಲಿ ಪ್ರೇರಣಾ ಶಿಬಿರ ಉದ್ಘಾಟಿಸಲಾಯಿತು. ಎನ್ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ, ಎಐಸಿಟಿಇ ಇನ್ನೋವೇಶನ್ ಅಧಿಕಾರಿ ಮತ್ತು ನೋಡಲ್ ಕೇಂದ್ರ ಮುಖ್ಯಸ್ಥ ಅಭಿಷೇಕ್ ರಂಜನ್ ಕುಮಾರ್, ಎಐಸಿಟಿಇ ಇನ್ನೋವೇಶನ್ ಮ್ಯಾನೇಜರ್ ಎಸ್.ಸ್ಯಾಮ್ ಜೈಕುಮಾರ್, ಎನ್ಐಟಿಕೆ ನೋಡಲ್ ಸೆಂಟರ್ ಎಸ್ಒಸಿ ಶಿಕ್ಷಕಿ ಡಾ.ಸುಪ್ರಭಾ ಕೆ.ಆರ್, ಐಡಿಇ ಬೂಟ್ ಕ್ಯಾಂಪ್ ಶಿಕ್ಷಕ ಪ್ರೊ.ಸುಬ್ರಾಯ ಹೆಗ್ಡೆ ಇದ್ದರು.

## ಅತ್ಯುತ್ತಮ ಯೋಜನೆಗಳಿಗೆ ಧನಸಹಾಯ

ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ನಲ್ಲಿ ವಿವಿಧ ರಾಜ್ಯಗಳ 288 ವಿದ್ಯಾರ್ಥಿಗಳು ಬೂಟ್ ಕ್ಯಾಂಪ್‌ನಲ್ಲಿ ಭಾಗವಹಿಸಿದ್ದಾರೆ. ಕಳೆದ ವರ್ಷ ಧನಸಹಾಯ ಪಡೆಯಲು 135 ಆವಿಷ್ಕಾರಗಳನ್ನು ಆಯ್ಕೆ ಮಾಡಲಾಗಿದೆ. ಶಿಕ್ಷಣ ಸಚಿವಾಲಯ ಆಯೋಜಿಸಿದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ನ ಫೈನಲ್‌ನಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಉತ್ತಮ ಆವಿಷ್ಕಾರಗಳು ಯುಕ್ತಿ ನಾವೀನ್ಯತೆ ಭಂಡಾರದ ಭಾಗವಾಗುತ್ತವೆ ಮತ್ತು ಯೋಜನೆಯನ್ನು ಕಾರ್ಯಗತಗೊಳಿಸಲು ಮತ್ತು ಉತ್ಪನ್ನವನ್ನು ಪೇಟೆಂಟ್ ಮಾಡಲು ಅನುದಾನ ಪಡೆಯುತ್ತವೆ ಎಂದು ಅಭಿಷೇಕ್ ರಂಜನ್ ಕುಮಾರ್ ತಿಳಿಸಿದರು.

ವಿದ್ಯಾರ್ಥಿಗಳು ತಮ್ಮ ಕೌಶಲವನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳುವ ಮೂಲಕ ಉದ್ಯಮಿಗಳಾಗಲು ಇದು ಸೂಕ್ತ ಸಮಯ. ಸ್ಟಾರ್ಟಪ್‌ಗಳನ್ನು ಸ್ಥಾಪಿಸಲು ಪ್ರೇರಣೆ ನೀಡಲು ಮತ್ತು ಯುವ ಜನರನ್ನು ಮಾರುಕಟ್ಟೆಗೆ ಸಿದ್ಧಗೊಳಿಸಲು ಈ ಕ್ಯಾಂಪ್‌ಗಳು ನೆರವಾಗಲಿವೆ. ನವೀನ ಉತ್ಪನ್ನಗಳ ತಯಾರಿ, ಜತೆಗೆ ಅವುಗಳನ್ನು ಮಾರುಕಟ್ಟೆಗೆ ಕೊಂಡೊಯ್ಯುವುದು ಕೂಡ ಮುಖ್ಯ. ಈ ನಿಟ್ಟಿನಲ್ಲಿ ಶಿಕ್ಷಣ ಸಚಿವಾಲಯವು ಪೂರಕ ಕಾರ್ಯಕ್ರಮಗಳನ್ನು ಬೆಂಬಲಿಸುತ್ತದೆ.

। ಪ್ರೊ.ಬಿ.ರವಿ ಎನ್ಐಟಿಕೆ ಸುರತ್ಕಲ್ ನಿರ್ದೇಶಕ

Vijayavani, Date:24/09/24, p, no -03